**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಹಾಗೂ ಶ್ರೀ ಎಂ.ನಾಗರಾಜು ರವರುಗಳು ನಿಯಮ 72ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಪ್ರಶ್ನೆ:-

ಬೆಳಗಾವಿ ಡಿಡಿಪಿಐ ಕಚೇರಿ ಕಟ್ಟಡವು ಇತ್ತೀಚೆಗೆ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಸೋರುತ್ತಿರುವುದರಿಂದ, ಅಲ್ಲಿನ ಸಿಬ್ಬಂದಿಗಳು ಕೊಡೆ ಹಿಡಿದು ಕೆಲಸ ಮಾಡುತ್ತಿದ್ದು, ಸದರಿ ಕಟ್ಟಡದಲ್ಲಿ ಸಂರಕ್ಷಿಸಿರುವ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಅತ್ಯಮೂಲ್ಯ ದಾಖಲೆಗಳು ಹಾಳಾಗುವುದರಿಂದ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗುತ್ತಿದ್ದು, ಕಟ್ಟಡವನ್ನು ತುರ್ತಾಗಿ ದುರಸ್ತಿಗೊಳಿಸುವ ಕುರಿತು ದಿನಾಂಕ:24.07.2024ರ ಕಲಾಪದಲ್ಲಿ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನವನ್ನು ಸೆಳೆಯುವ ಕುರಿತು.

ಉತ್ತರ:-

ಬೆಳಗಾವಿ ನಗರದಲ್ಲಿನ ಉಪನಿರ್ದೇಶಕರು(ಆಡಳಿತ),ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರ ಕಾರ್ಯಾಲಯ ಇರುವ ಕಟ್ಟಡವು ಸ್ಕೂಲ್ ಬೋರ್ಡ್ ಅವಧಿಯಲ್ಲಿ, ಅಂದರೆ 1956ರಲ್ಲಿ ನಿರ್ಮಾಣ ಮಾಡಲಾಗಿದ್ದು, ಕಟ್ಟಡದ ಮೇಲ್ಛಾವಣಿ ಹಂಚಿನಿಂದ ಕೂಡಿದೆ. ಈ ಕಟ್ಟಡವು ಕಛೇರಿ ಕೊಠಡಿ ಹಾಗೂ ಅಧಿಕಾರಿಗಳ ಕೊಠಡಿಗಳನ್ನೊಳಗೊಂಡ ವಿಶಾಲವಾದ ಕಟ್ಟಡವಾಗಿದ್ದು, ಒಟ್ಟು 09 ಕೊಠಡಿಗಳು ಹಾಗೂ 02 ವಿಸ್ತಾರವಾದ ಹಾಲ್ ಮತ್ತು 01 ಸಭಾ ಕೊಠಡಿ ಹೊಂದಿರುತ್ತದೆ.

ಸದರಿ ಕಟ್ಟಡವು ಸುಮಾರು 70 ವರ್ಷಗಳಷ್ಟು ಹಳೆಯ ಕಟ್ಟಡವಾಗಿದ್ದು, ಗೋಡೆಗಳು ಕಲ್ಲಿನಿಂದ ನಿರ್ಮಾಣಗೊಂಡಿದೆ. ಈ ಕಟ್ಟಡದ ಸುತ್ತಲು ಗಿಡಮರಗಳು ಇರುವುದರಿಂದ ಮಳೆಯಲ್ಲಿ ಮರದ ಟೊಂಗೆಗಳು ಮುರಿದು ಹಂಚಿನ ಮೇಲೆ ಬೀಳುತ್ತಿರುವುದರಿಂದ ಮೇಲ್ಛಾವಣಿಗೆ ಹೆಚ್ಚಿನ ಹಾನಿಯಾಗಿರುತ್ತದೆ. ಮೇಲ್ಛಾವಣಿಯಲ್ಲಿರುವ ಹಂಚುಗಳನ್ನು ತೆಗೆದು ತಗಡಿನ ಶೀಟ್‌ಗಳನ್ನು ಅಳವಡಿಸಿ ಮಳೆಗಾಲದಲ್ಲಿ ಕಟ್ಟಡವು ಸೋರದೇ ಸುಭದ್ರಗೊಳಿಸುವ ಸಲುವಾಗಿ ಲೋಕೋಪಯೋಗಿ ಇಲಾಖೆಗೆ ವಿನಂತಿಸಲಾಗಿರುತ್ತದೆ. ಮುಂದುವರೆದು ಸದರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಸಜ್ಜಿತಗೊಳಿಸಲು ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದರಿಂದ ಅದರ ಬದಲಾಗಿ ಕಛೇರಿ ಅವರಣದಲ್ಲಿ ಖಾಲಿ ಇರುವ ಜಾಗದಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಿ ಕಾರ್ಯಾಲಯಕ್ಕೆ ಬಳಸುವ ಉದ್ದೇಶದಿಂದ ಲೋಕೋಪಯೋಗಿ ಇಲಾಖೆಗೆ ಅಂದಾಜು ಪಟ್ಟಿ ತಯಾರಿಸಲು ಬೇಡಿಕೆ ಸಲ್ಲಿಸಲಾಗಿದ್ದು, ಬದಲಿ ವ್ಯವಸ್ಥೆಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಮಳೆಯ ನೀರಿನಿಂದಾಗಿ ಕಛೇರಿಯ ಯಾವುದೇ ದಾಖಲೆಗಳು ಹಾಳಾಗದಂತೆ ಜಾಗ್ರತೆ ವಹಿಸಲಾಗಿರುತ್ತದೆ. ಮಳೆಗಾಲದಲ್ಲಿ ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಹೊದಿಕೆಯ ವ್ಯವಸ್ಥೆಯನ್ನು ಮಾಡಿಕೊಂಡು ಕಛೇರಿ ಕಟ್ಟಡ ಸೋರಿಕೆಯಾಗದೇ ಇರುವಂತೆ ರಕ್ಷಿಸಿಕೊಳ್ಳುವ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ.

**ಸಂಖ್ಯೆ : ಇಪಿ 244 ಯೋಸಕ 2024**

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**